ದಿನಾಂಕ : 24.08.2021 ಓ.ಎಸ್ ನಂ.148/2016 ರಲ್ಲಿ
ಪಿ.ಡಬ್ಲ್ಯೂ-1(ಕಲಾವತಿ)

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು 1, 3 ಮತ್ತು 4ನೇ ಪ್ರತಿವಾದಿಗಳ ಪರ ಶ್ರೀ ಬಿ.ವಿ.ಎಲ್. ವಕೀಲರಿಂದಃ

ನನ್ನ ಗಂಡನ ಮರಣಾ ನಂತರ ಬರುವ ಪಿಂಚಣಿ ಹಣವನ್ನು ನಾನೇ ಪಡೆದುಕೊಳ್ಳುತ್ತಿದ್ದೇನೆ ಎಂದರೆ ಸರಿ, ಸಾಕ್ಷಿಯು ಅವರದ್ದು ಖಾಸಗಿ ಕಂಪನಿಯಾದ ಕಾರಣ ಮಾಸಿಕ 2,000/- ರೂಪಾಯಿ ಪಿಂಚಣಿ ಹಣ ಪಡೆಯುತ್ತಿದ್ದೇನೆ ಎಂದು ನುಡಿಯುತ್ತಾರೆ. ನನ್ನ ಮತದಾರರ ಗುರುತಿನ ಚೀಟಿ, ಆಧಾರ್ ಕಾರ್ಡ್ ಮತ್ತು ಪಡಿತರ ಚೀಟಿಯಲ್ಲಿರುವ ವಿಳಾಸ ಕೆಂಪದ್ಯಾಪನಹಳ್ಳಿಯ ವಿಳಾಸ ಅಲ್ಲ ಎಂದರೆ ಸಾಕ್ಷಿಯು ಮತದಾರರ ಗುರುತಿನ ಚೀಟಿ ಕೆಂಪದ್ಯಾಪನಹಳ್ಳಿಯ ವಿಳಾಸದಲ್ಲಿದೆ ಎಂದು ನುಡಿಯುತ್ತಾರೆ. ನನ್ನ ಮತದಾರರ ಗುರುತಿನ ಚೀಟಿಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ನನಗೆ ಬರುವ ಸಂಬಳ ಮತ್ತು ಪಿಂಚಣಿ ಹಣದಿಂದ ನನ್ನ ಜೀವನ ನಡೆಸಲು ತೊಂದರೆ ಇಲ್ಲ ಎಂದರ ಸರಿಯಲ್ಲ, ಸಾಕ್ಷಿಯು ಮುಂದುವರೆದು ಮನೆ ಬಾಡಿಗೆ ಕಟ್ಟಲು, ಮಗನ ವಿದ್ಯಾಭ್ಯಾಸಕ್ಕೆ ಹಣ ಸಾಕಾಗುವುದಿಲ್ಲ ಹಾಗೂ ಬೆಂಗಳೂರಿನಲ್ಲಿ ಜೀವನ ನಡೆಸಲು ಕಷ್ಟವಾಗುತ್ತಿದೆ ಎಂದು ನುಡಿಯುತ್ತಾರೆ.

ನಾನು ಶಿವಣ್ಣ ಅವರ ಜೀವತ ಕಾಲದಲ್ಲಿ ಕಟ್ಟಿದ ಮನೆಯಲ್ಲಿ ವಾಸವಿದ್ದು ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ದಾವಾ ಸ್ವತ್ತುಗಳ ಚಕ್ಕುಬಂದಿ ಮತ್ತು ಸರ್ವೇ ನಂಬರ್ ಹೇಳಲು ಸಾಧ್ಯವಿಲ್ಲ ಎಂದರೆ ಹೇಳುತ್ತೇನೆ ಎಂದು ಸಾಕ್ಷಿಯು ನುಡಿಯುತ್ತಾರೆ. ಎಲ್ಲಾ ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟ ಕಂದಾಯ ದಾಖಲೆಗಳು ಪ್ರತಿವಾದಿಗಳ ಹೆಸರಿನಲ್ಲಿವೆ ಎಂದರೆ ಸಾಕ್ಷಿಯು ಒಟ್ಟು ಕುಟುಂಬದಲ್ಲಿರುವ ಕಾರಣ ಅವರೇ ಕಂದಾಯ ಪಾವತಿಸುತ್ತಿದ್ದಾರೆ ನಾನು

ಪಾವತಿಸುತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಮತ್ತು ಪ್ರತಿವಾದಿಗಳು ಒಟ್ಟು ಕುಟುಂಬದ ಸದಸ್ಯರಲ್ಲ ಎಂದರೆ ಸರಿಯಲ್ಲ, ನಾನು ಪ್ರತಿವಾದಿಗಳೊಂದಿಗೆ ದಾವಾ ಸ್ವತ್ತುಗಳ ಜಂಟಿ ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಪಿತ್ರಾರ್ಜಿತ ಆಸ್ತಿಗಳಲ್ಲ ಎಂದರೆ ಸರಿಯಲ್ಲ, ಅವುಗಳು ಬೆಲೆ ಬಾಳುವ ಆಸ್ತಿಗಳಾದ ಕಾರಣ ಅವುಗಳನ್ನು ಕಬಳಿಸಲು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾ ಸ್ವತ್ತುಗಳಿಂದ ಬರುವ ಆದಾಯದ ಮೇಲೆ ಅವಲಂಬಿತರಾಗಿದ್ದಾರೆ ಎಂದರೆ ಸರಿಯಲ್ಲ. ವಾದಪತ್ರ ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರಗಳಲ್ಲಿ ಹೇಳಿದ ವಿಚಾರಗಳನ್ನು ಈ ದಾವೆಗೋಸ್ಕರ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನನಗೂ ಪ್ರತಿವಾದಿಗಳಿಗೂ ಯಾವುದೇ ಸಂಬಂಧವಿಲ್ಲ ಹಾಗೂ ನನಗೆ ದಾವಾ ಸ್ವತ್ತುಗಳ ಮೇಲೆ ಹಕ್ಕಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡಲು ದುರುದ್ದೇಶದಿಂದ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಆರ್ಥಿಕವಾಗಿ ಚೆನ್ನಾಗಿದ್ದು, ಮಗನಿಗೆ ಖಾಸಗಿ ಶಾಲೆಯಲ್ಲಿ ವಿದ್ಯಾಭ್ಯಾಸ ಕೊಡಿಸಿ ಒಳ್ಳೆಯ ಜೀವನ ನಡೆಸುತ್ತಿದ್ದೇನೆ ಎಂದರೆ ಸಾಕ್ಷಿಯು ನಾನು ಕಷ್ಟ ಪಟ್ಟು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡಿ ಮಗನಿಗೆ ವಿದ್ಯಾಭ್ಯಾಸ ಕೊಡಿಸುತ್ತಿದ್ದೇನೆ ಹೊರತು ಒಳ್ಳೆಯ ಜೀವನ ನಡೆಸುತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಹಾಜರು ಮಾಡಿದ ಯಾವುದೇ ದಾಖಲೆಗಳು ನನ್ನ ಹೆಸರಿನಲ್ಲಿಲ್ಲ ಹಾಗೂ ಅವುಗಳನ್ನು ಈ ದಾವೆಗೋಸ್ಕರ ಸೃಷ್ಟಿಸಿದ್ದೇನೆ ಎಂದರೆ ಸುಳ್ಳು ಎಂದು ಸಾಕ್ಷಿಯು ನುಡಿಯುತ್ತಾರೆ. ಆಸ್ತಿಯಲ್ಲಿ ಭಾಗ ಕೋರಿ ನಾನು ಹೇಳಿದಂತೆ ಯಾವುದೇ ಪಂಚಾಯಿತಿ ನಡೆದಿಲ್ಲ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಊರಿನಲ್ಲಿ 4-5 ಜನ ದೊಡ್ಡವರು ಸೇರಿ ನ್ಯಾಯ ಪಂಚಾಯಿತಿ ಮಾಡಿದ್ದರು, ಭಾಗ ಕೊಡುತ್ತೇವೆ ಎಂದು ಹೇಳಿ ಕೊಡದ ಕಾರಣ

ದಿನಾಂಕ : 24.08.2021 ಓ.ಎಸ್ ನಂ.148/2016 ರಲ್ಲಿ

ಪಿ.ಡಬ್ಲ್ಯೂ-1(ಕಲಾವತಿ)

ನ್ಯಾಯಾಲಯಕ್ಕೆ ಬಂದಿದ್ದೇವೆ ಎಂದು ನುಡಿಯುತ್ತಾರೆ. ಪಂಚಾಯಿತಿಯಲ್ಲಿ ಲಕ್ಷ್ಮೀಕುಮಾರ, ಮಾರಣ್ಣ, ಚಂದ್ರಶೇಖರ್, ಸೀತಾರಾಮಯ್ಯ, ಮೋಟಯ್ಯ, ಗೋವಿಂದರಾಜು ಇದ್ದರು. ಯಾವ ದಿನಾಂಕದಂದು ಪಂಚಾಯಿತಿ ನಡೆದಿತ್ತು ಎಂದರೆ ಸಾಕ್ಷಿಯು ದಿನಾಂಕ ಹೇಳಲಾಗುವುದಿಲ್ಲ ಆದರೆ 2010 ಮತ್ತು 2016 ರಲ್ಲಿ 3-4 ಬಾರಿ ಪಂಚಾಯಿತಿ ನಡೆದಿತ್ತು ಎಂದು ನುಡಿಯುತ್ತಾರೆ. 2010 ರಲ್ಲಿ ಪಂಚಾಯಿತಿ ನಡೆದ ನಂತರ ದಾವೆ ಹಾಕಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಅವರು ಭಾಗ ಕೊಡುತ್ತೇವೆ ಎಂದು ಹೇಳಿದ ಕಾರಣ ನಾನು ಕಾಯುತ್ತಾ ಬಂದೆ ಅವರು ಯಾವುದೇ ಪ್ರತಿಕ್ರಿಯೆ ನೀಡದ ಕಾರಣ ನಂತರ ದಾವೆ ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. 2010 ರಲ್ಲಿ ನಡೆದ ಪಂಚಾಯಿತಿ ಬಗ್ಗೆ ನನ್ನ ವಾದಪತ್ರ ಮತ್ತು ಪ್ರಮಾಣಪತ್ರಗಳಲ್ಲಿ ಹೇಳಿಲ್ಲ ಎಂದರೆ ಸರಿ. ಯಾವುದೇ ಪಂಚಾಯಿತಿ ನಡೆಯದಿದ್ದರೂ ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ವ್ಯಾಜ್ಯ ಕಾರಣ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಅನುಪಮ ಲಕ್ಷ್ಮಿ.ಬಿ)<br>
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು<br>
ಮತ್ತು ಜೆ.ಎಂ.ಎಫ್.ಸಿ.,<br>
ರಾಮನಗರ.